

# ಅಜ್ಜಿಗುಂಡಿ ಜಲಧಾರೆ!

ಸುಮಾರು ೫೦ ಅಡಿ ಎತ್ತರದಿಂದ ಧುಮುಕುವ ಈ ಅಜ್ಜಿಗುಂಡಿ ಜಲಪಾತವು ನಿಸರ್ಗದ ಮಧ್ಯೆ ಅವಿತುಕೊಂಡಿದೆ.

■ ಚಿತ್ರ– ಬರಹ:
**ಗಣಪತಿ ಹಾಸ್ಪುರ**

ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕ ಪರಿಸರದಲ್ಲಿ ಹೆಚ್ಚಿನ ಸಂಖ್ಯೆಯ ಜಲಪಾತಗಳಿವೆ. ಇವುಗಳ ಪೈಕಿ ಅಜ್ಜಿಗುಂಡಿ ಜಲಧಾರೆಯೂ ಒಂದು.

ಇದು ಯಲ್ಲಾಪುರ ತಾಲೂಕಿನಲ್ಲಿದೆ. ತಾಲೂಕು ಕೇಂದ್ರದಿಂದ ಇಡಗುಂಡಿ –ವಜ್ರಳ್ಳಿ ಮಾರ್ಗದಲ್ಲಿ ಹೋಗಬೇಕು. ಅಂದರೆ ಷಹರದಿಂದ ಸುಮಾರು 20 ಕಿ. ಮೀ. ದೂರ ಕ್ರಮಿಸಿದಾಗ (ವಜ್ರಳ್ಳಿಯಿಂದ ಸ್ವಲ್ಪ ಹಿಂದೆಯೇ) ಬೀಗಾರ್ ಕತ್ರಿ ಸಿಗುತ್ತದೆ. ಅಲ್ಲಿಂದ ಬಲಭಾಗದ ಟಾರ್ ರಸ್ತೆಯಲ್ಲಿ ಸುಮಾರು ಒಂದು ಕಿ. ಮೀ. ಸಾಗಿದಾಗ 'ಅಜ್ಜಿಗುಂಡಿ ಜಲಪಾತಕ್ಕೆ ಹೋಗುವ ಮಾರ್ಗ' ಎಂದು ಸೂಚಿಸುವ ನಾಮಫಲಕವಿದೆ. ಅಲ್ಲಿಂದ ಎಡ ಭಾಗದ ಕಚ್ಚಾ ರಸ್ತೆಯ ಮೂಲಕ ಅನತಿ ದೂರ ಸಾಗಿ; ಪುನಃ ಬಲ ಭಾಗದ ರಸ್ತೆಯಲ್ಲಿ ಅರ್ಧ ಕಿ. ಮೀ. ಹೋಗಬೇಕು. ಈ ರಸ್ತೆಯು ಅಲ್ಲಿಯೇ ಕೊನೆಗೊಳ್ಳುತ್ತದೆ. ಅಲ್ಲೇ ಎರಡು ಮನೆಗಳು, ಸುತ್ತಮುತ್ತ ಸಮೃದ್ಧವಾದ ಅಡಿಕೆ, ತೆಂಗಿನ ತೋಟಗಳು ಕಾಣಸಿಗುತ್ತವೆ. ಇಲ್ಲಿಯವರೆಗೆ ದ್ವಿಚಕ್ರ ವಾಹನ ಅಥವಾ ದೊಡ್ಡ ವಾಹನವನ್ನು ತರಬಹುದು. ಅಲ್ಲಿಂದ ಎಡ ಭಾಗದ ಕಾಲು ದಾರಿಯಲ್ಲಿ , ಸುಮಾರು ಒಂದು ಫರ್ಲಾಂಗ ದೂರದವರೆಗೆ ಪಾದಯಾತ್ರೆ ಮಾಡುವುದು ಅನಿವಾರ್ಯ.

(8ನೇ ಪುಟ ನೋಡಿ)